ಸಾವಧಾನ ಎಂಬ ಪದವೇ ನೆನಪಿಗೆ ಬರುತ್ತದೆ. ಆ ಟ್ಯೂನ್‌ನಲ್ಲಿ ಅಬ್ಬರ ಇಲ್ಲವೇ ಇಲ್ಲ. ಸುಮ್ಮನೆ ಕಣ್ಣುಮುಚ್ಚಿ ಆಲಿಸಿದರೆ ಅದರಲ್ಲೂ ಧ್ಯಾನಭಾವ ಸುಪ್ತವಾಗಿರುವುದು ನಮ್ಮ ಇಂದ್ರಿಯಗಳ ಅರಿವಿಗೆ ಬಂದೀತು.

ಒಂದು ನಿಮಿಷಕ್ಕೂ ಹೆಚ್ಚು ಅವಧಿಯ ಆ ಸಿಗ್ನೇಚರ್ ಟ್ಯೂನ್‌ನಲ್ಲಿ ದೃಶ್ಯವತ್ತಾಗಿ ನೋಡಲು ಹೆಚ್ಚೇನೂ ಇಲ್ಲ. ಉರುಳುವ ಗೋಳ ಗೋಳ ಕ್ರಮೇಣ ಸುರುಳಿಯಾಗಿ ಸುತ್ತಿಕೊಂಡು ದೂರದರ್ಶನದ ಸಂಕೇತದ ರೂಪು ತಳೆದು ನಿಲ್ಲುತ್ತದಷ್ಟೆ. ಇದೇ ಸಾವಧಾನವನ್ನು ಧಾರಾವಾಹಿಗಳ ಪ್ರಾರಂಭಿಕ ಕಾಲಕ್ಕೂ ಅನ್ವಯಿಸಬಹುದು. 1984ರಲ್ಲಿ ಶುರುವಾದ ಭಾರತದ ಮೊದಲ ಹಿಂದಿ ಧಾರಾವಾಹಿ 'ಹಮ್ ಲೋಗ್' ಕಂತುಗಳನ್ನು ಬರೆದವರು ಮನೋಹರ ಶ್ಯಾಮ್ ಜೋಷಿ. ಪತ್ರಕರ್ತರೂ ಆಗಿದ್ದ ಈ ಬರಹಗಾರ 'ಕಸಾಪ್' ಎಂಬ ಕಾದಂಬರಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೂ ಭಾಜನರಾದವರು. ಧಾರಾವಾಹಿ ನಿರ್ದೇಶಿಸಿದ ಪಿ. ಕುಮಾರ್ ವಾಸುದೇವ್ ಸಿನಿಮಾ ಹಿನ್ನೆಲೆಯಿಂದ ಬಂದವರು. 'ಶಾಲಿಮಾರ್' ಸೀಕ್ವೆಲ್ ಚಿತ್ರದ ವಿಡಿಯೊ ನಿರ್ದೇಶಕ ಆಗಿ ಅನುಭವ ಬೆನ್ನಿಗಿಟ್ಟುಕೊಂಡಿದ್ದವರು. ಮಧ್ಯಮ ವರ್ಗದವರ ನಿತ್ಯ ಆಗು–ಹೋಗುಗಳ ಹೂರಣವನ್ನೇ ಆಧರಿಸಿದ 'ಹಮ್ ಲೋಗ್' ಧಾರಾವಾಹಿಯ ಯಶಸ್ಸು ಆಮೇಲೆ 'ಬುನಿಯಾದ್' ಧಾರಾವಾಹಿಗೆ ಬರೆಯಲು ಮನೋಹರ ಶ್ಯಾಮ್ ಜೋಷಿ ಅವರಿಗೆ ಪ್ರೇರಣೆಯಾಯಿತು. 'ಕಾಕಾಜಿ ಕಹೀಂ' ಎಂಬ ರಾಜಕೀಯ ವಿಡಂಬನೆಯ ಧಾರಾವಾಹಿ ಬರೆಯುವಷ್ಟು ಸ್ವಾತಂತ್ರ್ಯವನ್ನು ಮುಂದೆ ಅವರು ತೆಗೆದುಕೊಂಡರು.

ಹತ್ತೇ ವರ್ಷ. 1994ರಲ್ಲಿ 'ಶಾಂತಿ' ಮೆಗಾ ಧಾರಾವಾಹಿ ದೂರದರ್ಶನದಲ್ಲಿ ಪ್ರಾರಂಭವಾಯಿತು. ಆದಿ ಪೋಚಾ ಎಂಬ ಹೆಸರೇ ಕೇಳಿರದ ನಿರ್ದೇಶಕ ಅದರ ಕಂತುಗಳನ್ನು ಮುಂದಿಟ್ಟರು. ಬಾಲಿವುಡ್‌ಗೆ ಸಂಬಂಧಿಸಿದ ಎರಡು ಕುಟುಂಬಗಳ ಒಳಗಿನ ಘಟನಾವಳಿಗಳು ಧಾರಾವಾಹಿಯ ಹೂರಣ. ಕಥಾನಾಯಕಿಯೇ ಶಾಂತಿ. ಅವಳು ಉದಯೋನ್ಮುಖ ಪತ್ರಕರ್ತೆ. ಬರೆಯುವ ಉತ್ಸಾಹದಲ್ಲಿ ಅವಳ ಕಣ್ಣಿಗೆ ಬೀಳುವ ಪ್ರಕರಣಗಳೆಲ್ಲ ಧಾರಾವಾಹಿಯ ಭಿತ್ತಿ ಮೇಲೆ ದೃಶ್ಯಗಳಾಗಿ ಮೂಡುತ್ತಾ ಹೋಯಿತು. ಅದ್ದೂರಿ ಮೇಕಿಂಗ್‌ನಿಂದಾಗಿ 'ಹಮ್ ಲೋಗ್' ಕಾಲದ ಮಧ್ಯಮವರ್ಗದ ಕಥನದಿಂದ ಧಾರಾವಾಹಿ ಶ್ರೀಮಂತರ ಕಥನಗಳಿಗೆ ದೊಡ್ಡ ಮಟ್ಟದಲ್ಲಿ ಬಡ್ತಿ ಪಡೆದದ್ದೇ 'ಶಾಂತಿ' ಮೂಲಕ. ಇಂಥದೊಂದು ಸಾಧ್ಯತೆಗೆ ಭೂಮಿಕೆ ಸಿದ್ಧವಾದದ್ದೂ ಆಸಕ್ತಿಕರವಾಗಿದೆ.

'ಹಮ್ ಲೋಗ್' ನಂತರ 'ವಿಕ್ರಮ್ ಔರ್ ಬೇತಾಳ್' ಮರುವರ್ಷವೇ ಧಾರಾವಾಹಿ ಆಯಿತು. ಮಕ್ಕಳು ಕಣ್ಣರಳಿಸಿ ನೋಡಿದರು. ಅದೇ ವರ್ಷ 'ಕರಮ್ ಚಂದ್' ಪತ್ತೇದಾರಿ ಕಾದಂಬರಿ ಮೂಲಕ ಪಂಕಜ್ ಕಪೂರ್ ಗುರುತಾದರು. ಅದರ ಆಯುಸ್ಸು ನಾಲ್ಕು ವರ್ಷವಿತ್ತೆನ್ನುವುದೇ ಜನಪ್ರಿಯತೆಗೆ ಸಾಕ್ಷಿ. ಶಂಕರ್ ನಾಗ್ ಅದೇ ಸಂದರ್ಭದಲ್ಲಿ ತಮ್ಮ ಸೃಜನಶೀಲತೆಯನ್ನು ಒರೆಗೆ ಹಚ್ಚಿಕೊಂಡಿದ್ದು 'ಮಾಲ್ಗುಡಿ ಡೇಸ್' ಮೂಲಕ. ಕುಂದನ್ ಶಾ, ಸಯೀದ್ ಅಖ್ತರ್ ಮಿರ್ಜಾ ನಿರ್ದೇಶನದ 'ನುಕ್ಕಡ್' ಕುಡುಕನ ಬಾಯಿಯ ಸತ್ಯ ಸಾರಾಂಶದ ನಗೆ ಪ್ರಹಸನಗಳಿಂದ ಜನಮನ ಗೆದ್ದಿತು. ಆ ಧಾರಾವಾಹಿ ಬರೆದ ಪ್ರಬೋಧ್ ಜೋಷಿ ಸಾಹಿತ್ಯದ ವಿದ್ಯಾರ್ಥಿಯೇ.

'ಹಮ್ ಲೋಗ್' ಒಂದು ರೀತಿಯಲ್ಲಿ 'ಮನೆ ಮನೆ ರಾಮಾಯಣ' ಆದರೆ, ಆಮೇಲೆ ರಮಾನಂದ ಸಾಗರ್ ನಿಜವಾದ ರಾಮಾಯಣವನ್ನೇ 1987ರಲ್ಲಿ ತೆರೆಗೆ ತಂದರು. ಬಿ.ಆರ್. ಚೋಪ್ರಾ ಹಾಗೂ ರವಿ ಚೋಪ್ರಾ ಎರಡು ವರ್ಷಗಳ ನಂತರ 'ಮಹಾಭಾರತ'ವನ್ನು ತೆರೆಗೆ ತರಲು ಇದೇ ಪ್ರೇರಣೆ. 'ಫೌಜಿ' ಧಾರಾವಾಹಿಯ ಚಿಮ್ಮುಹಲಗೆಯ ಮೇಲೆ ಶಾರುಖ್ ಖಾನ್ ನಿಂತಿದ್ದೂ 1980ರ ದಶಕದ ಕೊನೆಯಲ್ಲೇ.

'ಶಾಂತಿ' ಧಾರಾವಾಹಿ ಬಂದಮೇಲೆ ಮೆಗಾ



'ಸುಬ್ಬುಲಕ್ಷ್ಮಿ ಸಂಸಾರ'ದ ದೀಪಾ

## ಕ್ಷೋಭೆಯ ಶಾಮಕ, ವ್ಯಸನವೂ ಹೌದು!

ಧಾರಾವಾಹಿಗಳನ್ನು ಮನೋವಿಜ್ಞಾನಿಗಳು ಸೀರಿಯಲ್ ಕಿಲ್ಲರ್ ಎನ್ನಲು ಮೊದಲ ಕಾರಣ ಅದು ಶಿಕ್ಷಕನ ಕೆಲಸ ಮಾಡುತ್ತಿಲ್ಲ ಎನ್ನುವುದು. ಉನ್ಮಾದದ ಮಟ್ಟದಲ್ಲಿ ಇರುವ ಮನಸ್ಸೆಂಬ ಆರನೇ ಇಂದ್ರಿಯಕ್ಕೆ ಜೋಮು ಹಿಡಿಸುವ ಸರಕು ಬೇಕಾಗಿದೆ ಎನ್ನುವ ವಾದವಿದೆ. ಅದನ್ನು ಧಾರಾವಾಹಿಗಳು ಪೂರೈಸುತ್ತಿವೆ.

ಈಗ ಧ್ಯಾನಕ್ಕೆ ಕ್ಲಾಸಿಗೆ ಹೋಗುತ್ತಾರೆಯೇ ವಿನಾ ಓದುವುದನ್ನೇ ಧ್ಯಾನವಾಗಿಸಿಕೊಳ್ಳುವವರು ವಿರಳ. ಸಂಗೀತದಲ್ಲೂ ತಾನುಗಳ ಅವಧಿ ಕಡಿತಗೊಂಡಿದೆ. ಎರಡನೇ ರಾಗ ನುಡಿಸುವ ಮೊದಲೇ ಇಷ್ಟದ ಧಾರಾವಾಹಿ ನೋಡಲು ಪ್ರೇಕ್ಷಕ ಎದ್ದು ಹೊರಟುಬಿಟ್ಟರೆ ಎಂಬ ಆತಂಕ. ಕ್ಷೋಭೆಯಲ್ಲಿರುವ ಮಂದಿಗೆ ಧಾರಾವಾಹಿಗಳೇ ಶಾಮಕಗಳಂತೆ ಒದಗಿಬರುತ್ತಿರಲೂ ಸಾಕು ಎನ್ನುತ್ತಾರೆ ಮನೋವಿಜ್ಞಾನಿ ಶ್ರೀಧರಮೂರ್ತಿ. ಚಟ, ವ್ಯಸನ ಎನ್ನುತ್ತೇವಲ್ಲ; ಅವುಗಳ ಸಾಲಿಗೆ ಧಾರಾವಾಹಿ ವೀಕ್ಷಣೆಯೂ ಸೇರಿಬಿಟ್ಟಿದೆ ಎನ್ನುವುದು ಅವರ ವಾದ.

ಅದೇನೇ ಇರಲಿ, ಇವೆಲ್ಲ 'ಕಹಾನಿ ಘರ್ ಘರ್ ಕೀ' ಎನ್ನುವುದನ್ನಂತೂ ಒಪ್ಪಲೇಬೇಕು. ಮತ್ತೆ ಟಿ.ಎನ್. ಸೀತಾರಾಂ 'ಮಗಳು ಜಾನಕಿ' ಮೂಲಕ ಮನೋನಂದನ ಥ್ರಿಲ್ಲರ್ ಹೇಳಹೊರಟಿದ್ದಾರೆ. ಧಾರಾವಾಹಿ ಚಕ್ರ ಉರುಳುತ್ತಲೇ ಇದೆ; ಅವವೇ ಸೃಷ್ಟಿಕರ್ತರ 'ಅಪ್ ಡೇಟೆಡ್ ವರ್ಷನ್'ಗಳೊಂದಿಗೆ!